# ಪ್ರೊಲ್ಕಿ

## ಹೊಳೆಯುವ ಕತ್ತಿಗೆ ಮಿನುಗುವ ನೆಕ್ಲೇಸ್



**ಅನ್‌ಕಟ್ ಡೈಮಂಡ್ ಬಳಸಿ ತಯಾರಿಸುವ ಪೊಲ್ಕಿ ನೆಕ್ಲೇಸ್ ಈಗೀಗ ಬಹುಬೇಡಿಕೆಯ ಒಡವೆಯ ಸಾಲಿಗೆ ಸೇರಿದೆ. ಕತ್ತುತುಂಬ ಕಾಣುವ ಪೊಲ್ಕಿ ನೆಕ್ಲೇಸ್ ಒಂದೇ ಒಂದು ಧರಿಸಿದರೆ ಸಾಕು. ಬೇರೆ ಆಭರಣದ ಗೊಡವೆಯೂ ಬೇಡ.**

**■ ಸುಮನಾ ಜಿ. ಪ್ರಸಾದ್**

ಕತ್ತು ತುಂಬ ಕಾಣುವ, ಕತ್ತನ್ನೇ ಅಪ್ಪಿಕೊಳ್ಳುವ ಆಭರಣ ನೆಕ್ಲೇಸ್, ರೇಷ್ಮೆ ಸೀರೆ ಅಥವಾ ಇನ್ಯಾವುದೇ ಗ್ರ್ಯಾಂಡ್ ಉಡುಗೆ ಧರಿಸಿದಾಗ ಒಂದೇ ಒಂದು ನೆಕ್ಲೇಸ್ ಹಾಕಿಕೊಂಡರೆ ಸಾಕು. ನೆಕ್ಲೇಸ್‌ಗಳಲ್ಲೂ ಹಲವು ವಿಧ. ಚೋಕರ್, ಗೆಜ್ಜೆ ಮಾಲಾಕ್, ಸಾದಾ ನೆಕ್ಲೇಸ್‌ಗಳ ಸಾಲಿಗೆ ಇನ್ನೊಂದು ಸೇರ್ಪಡೆ ಪೊಲ್ಕಿ ನೆಕ್ಲೇಸ್.

ಪೊಲ್ಕಿ ಒಡವೆ ಮದುವೆಯಂತಹ ಅದ್ದೂರಿ ಕಾರ್ಯಕ್ರಮಗಳಿಗೆ ಅತ್ಯಂತ ಸೂಕ್ತವಾದದ್ದು. ರೇಷ್ಮೆ ಸೀರೆ, ಲೆಹಂಗಾ ತೊಟ್ಟಾಗ ಈ ಆಭರಣ ತೊಟ್ಟರೆ ಸೌಂದರ್ಯ ಇಮ್ಮಡಿಸುತ್ತದೆ. ಹಾಗೆಂದು ಪೊಲ್ಕಿ ಆಭರಣ ಇಂದು ನಿನ್ನೆಯದಲ್ಲ. ಪ್ರಾಚೀನ ಒಡವೆಯೇ ಇದು. ಈಗ ಹೊಸ ರೂಪ ತಾಳಿದೆ ಅಷ್ಟೆ. ಪೊಲ್ಕಿ ಎಂದರೆ ಕತ್ತರಿಸದೇ ಇರುವ ಮತ್ತು ಪಾಲಿಷ್ ಮಾಡಿಲ್ಲದ ವಜ್ರ ಎಂದರ್ಥ. ಚಿನ್ನದ ಮೇಲೆ ವಜ್ರದ ಹರಳುಗಳನ್ನು ಕೂರಿಸಿ ಸುಂದರ ವಿನ್ಯಾಸ ಮಾಡಿದಾಗ ಬರುವ ಒಡವೆಯೇ ಪೊಲ್ಕಿ ನೆಕ್ಲೇಸ್. ರೂಪದರ್ಶಿಯರು, ಸೆಲೆಬ್ರಿಟಿಗಳು ಮಾತ್ರವೇ ಬಳಸುತ್ತಿದ್ದ ಈ ಸಾಂಪ್ರದಾಯಿಕ ಆಭರಣ ಈಗ ಒಡವೆಪ್ರಿಯರ ತಿಜೋರಿ ಸೇರಿದೆ. ಅದ್ದೂರಿ ಕಾರ್ಯಕ್ರಮಗಳಲ್ಲಿ ಪೊಲ್ಕಿ ನೆಕ್ಲೇಸ್ ರಾಣಿಯಂತೆ ಮೆರೆಯುತ್ತಿದೆ.

ಮದುಮಗಳಿಗೂ ಈಗ ಪೊಲ್ಕಿ ನೆಕ್ಲೇಸ್ ಬೇಕೇ ಬೇಕು ಎಂಬಷ್ಟು ಜನಪ್ರಿಯ. ಹೀಗಾಗಿ ಪೊಲ್ಕಿ ನೆಕ್ಲೇಸ್ ಈಗ ಫ್ಯಾಷನ್ ಟ್ರೆಂಡ್ ಎನಿಸಿಕೊಂಡಿದೆ. ಈಗೀಗ ಬ್ರೈಡಲ್ ಕಲೆಕ್ಷನ್‌ನಲ್ಲಿ ಪೊಲ್ಕಿ ನೆಕ್ಲೇಸ್ ಮುಖ್ಯ ಸ್ಥಾನವನ್ನೇ ಪಡೆದುಕೊಂಡಿದೆ. ಇದು ಸ್ಟೇಟ್‌ಮೆಂಟ್ ಲುಕ್ ಕೊಡುವ ಕಾರಣ ಎಲ್ಲರ ಅಚ್ಚುಮೆಚ್ಚಿನ ಒಡವೆ ಇದಾಗಿದೆ.

ಪೊಲ್ಕಿ ವಿನ್ಯಾಸ ಆಕರ್ಷಕವಾಗಿದೆ. ಎರಡು ಬಗೆಯ ಹೊಸ ವಿನ್ಯಾಸಗಳಲ್ಲಿ ಲಭ್ಯ. ಹೈದರಾಬಾದ್ ಹಾಗೂ ರಾಜಸ್ತಾನಿ ವಿನ್ಯಾಸ. ಹೈದರಾಬಾದ್ ವಿನ್ಯಾಸದಲ್ಲಿ ಚಿನ್ನದ ಮೇಲೆ ಹರಳುಗಳನ್ನು ಪೋಣಿಸಿ ನೆಕ್ಲೇಸ್ ಹೆಣೆಯಲಾಗುತ್ತದೆ. ರಾಜಸ್ತಾನಿ ವಿನ್ಯಾಸದಲ್ಲೂ ಚಿನ್ನದಲ್ಲೇ ಹರಳುಗಳನ್ನು ಕಟ್ಟಿ ನೇಯುವುದಾದರೂ

